INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -02,March-April, 2026
Page No,84-90
Peer -Reviewed, Refereed Journal

# “ಶಿಕಾರಿಪುರ ತಾಲ್ಲೂಕು ಶಾಸನಗಳಲ್ಲಿ ಯುದ್ಧನಿರತ ಮಹಿಳೆಯರ ಚಿತ್ರಣ”

(ಕ್ರಿ. ಶ. 5 ರಿಂದ 18 ನೇ ಶತಮಾನದ ಶಾಸನಗಳನ್ನು ಅನುಲಕ್ಷಿಸಿ)

* ಡಾ. ಎನ್. ಜಿ. ಪ್ರಕಾಶ.[1]
** ಡಾ. ಪಾರ್ವತಮ್ಮ ಎಂ.[2]
*** ಡಾ. ಶಿವಕುಮಾರ ಸಿ. ಜಿ.[3]

ಇತಿಹಾಸದುದ್ದಕ್ಕೂ ಭಾರತೀಯ ಮಹಿಳೆಯರು ಅನೇಕ ಅಡೆತಡೆಗಳ ಜೊತೆಯಲ್ಲಿಯೇ, ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ. ಪುರಾಣಗಳ ಕಾಲದಿಂದಲೂ ಮಹಿಳೆಯರು ರಾಜ್ಯಾಡಳಿತ, ಯುದ್ಧ, ಶಾಂತಿ, ಸಾಹಿತ್ಯ & ಕಲೆಗಳ ಪ್ರಗತಿಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದ್ದಾರೆ. ಸಮಾಜದಲ್ಲಿ ಕೆಲವು ಮಹಿಳೆಯರು ತಮ್ಮ ಸ್ಥಾನ ಬಲದಿಂದ ಪ್ರಾಮುಖ್ಯತೆಯನ್ನು ಪಡೆದರೆ, ಇನ್ನು ಕೆಲವರು ತಮ್ಮ ಕಾರ್ಯ ಬಲದಿಂದ ಪ್ರಾಮುಖ್ಯತೆಯನ್ನು ಪಡೆಯುತ್ತಾರೆ. ಇಂತಹ ಸಂದರ್ಭದಲ್ಲಿ ಯುದ್ದದಲ್ಲಿ ಹೋರಾಡಿ ಗೆಲುವಿಗೆ ಕಾರಣರಾದವರು ನಮಗೆ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. ಈ ಮೂಲಕ ಅಡುಗೆ ಮಡುವ ಕೈ ಆಯುಧವನ್ನೂ ಹಿಡಿಯಬಲ್ಲದು ಎಂದು ನಿರೂಪಿಸಿದ್ದಾರೆ. ಉದಾ: ಗಂಗ ಅರಸ ಪೆರ್ಮಾಡಿದೇವನ ರಾಣಿ ಬಾಚಲಾದೇವಿ, ವೀರಶಾನ್ತರಸನ ರಾಣಿ ಛಗಲಾದೇವಿ, ಗೇರುಸೊಪ್ಪೆಯ ರಾಣಿ ಭೈರಾದೇವಿ, ರಾಣಿ ಅಬ್ಬಕ್ಕ, ಗುತ್ತಮಲ್ಲದೇವನ ರಾಣಿ ಪದುಮಲ್ಲದೇವಿ, ಕೆಳದಿಯ ರಾಣಿ ಚೆನ್ನಮ್ಮಾಜಿ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹಾಗೂ ಸಾಮಾನ್ಯ ವರ್ಗದ ಸ್ತ್ರೀಯರಾಗಿದ್ದ ನಾಳ್ಗಾವುಂಡಿ ಜಕ್ಕಿಯಬ್ಬೆ, ಅಕ್ಕಾದೇವಿ, ನಾಗಿಯಕ್ಕ, ವೆಣ್ಣಿಲಸೆಟ್ಟಿಕವ್ವೆ, ಮಲ್ಲಂದೂರು ಮಾದರ ಕಾಳನ ಪತ್ನಿ ಬೊಮ್ಮೊಂಬೆ ಇತ್ಯಾದಿ. ಈ ಹಿನ್ನೆಯಲ್ಲಿ ಪ್ರಸ್ತುತ ಲೇಖನದಲ್ಲಿ ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿರುವ ಶಾಸನಗಳು ಮತ್ತು ವೀರ–ಮಾಸ್ತಿಕಲ್ಲುಗಳನ್ನು ಆಧಾರವಾಗಿಟ್ಟುಕೊಂಡು ಕ್ರಿ, ಶ. 5 ರಿಂದ 18ನೇ ಶತಮಾನದಲ್ಲಿ ಜರುಗಿದ್ದ ಕೆಲವು ಯುದ್ಧಗಳಲ್ಲಿ ಭಾಗವಹಿಸಿದ್ದ ಪ್ರಭುತ್ವ ವರ್ಗದ & ಸಾಮಾನ್ಯ ವರ್ಗದ ಮಹಿಳೆಯರ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.

---

[1] .ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ನಾಗಮಂಗಲ, ಮಂಡ್ಯ ಜಿಲ್ಲೆ.
[2] .ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚೆನ್ನಗಿರಿ, ದಾವಣಗೆರೆ ಜಿಲ್ಲೆ.
[3] .ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ,

**ಮುಖ್ಯ ಪದಗಳು: (Key Words):** ಮಹಿಳೆ, ಆಡಳಿತ, ಯುದ್ಧ, ಶಿಕಾರಿಪುರ, ವೀರಗಲ್ಲು, ಮಾಸ್ತಿಕಲ್ಲು, ಪ್ರಭುವರ್ಗದ ಮಹಿಳೆಯರು, ಸಾಮಾನ್ಯ ವರ್ಗದ ಮಹಿಳೆಯರು, ಶಾಸನ.

**ಪೀಠಿಕೆ:**

ಸಮಾಜದ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸುತ್ತಾರೆ. ಒಂದು ದೇಶದ ಚೈತನ್ಯವನ್ನು ಅರ್ಥಮಾಡಿಕೊಳ್ಳಲು, ಅದರ ಶ್ರೇಷ್ಠತೆಯನ್ನು ಶ್ಲಾಘಿಸಲು ಹಾಗೂ ಅದರ ಮಿತಿಗಳನ್ನು ತಿಳಿದುಕೊಳ್ಳಲು ಉತ್ತಮವಾದ ಮಾರ್ಗವೆಂದರೆ ಅಲ್ಲಿನ ಮಹಿಳೆಯರ ಪಾತ್ರವನ್ನು ಅರಿತುಕೊಳ್ಳುವುದು. ಪ್ರಾಚೀನ ಕಾಲದಿಂದಲೂ ಭಾರತೀಯ ಮಹಿಳೆಯರು ಕುಟುಂಬ & ಸಮಾಜದಲ್ಲಿ **ಕಾರ್ಯೇಷು ದಾಸಿ, ಕರಣೇಷು ಮಂತ್ರಿ, ಭೋಜ್ಯೇಷು ಮಾತಾ, ರೂಪೇಷು ಲಕ್ಷ್ಮೀ, ಕ್ಷಮಯಾ ಧರಿತ್ರಿ, ಶಯನೇಷು ರಂಭಾ** ಎಂಬಂತೆ ಬಹುಮುಖಿ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಇತಿಹಾಸದುದ್ದಕ್ಕೂ ಭಾರತೀಯ ಮಹಿಳೆಯರು ತಮ್ಮ ಮೇಲೆ ವಿಧಿಸಲಾಗಿದ್ದ ಅನೇಕ ಅಡೆತಡೆಗಳನ್ನು ದಾಟಿ, ಗಮನಾರ್ಹ ಸಾಧನೆ ಮಾಡಿದ್ದಾರೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಲಲಿತಕಲೆ, ವಾಣಿಜ್ಯ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರಕ್ಕೆ ಮಹತ್ವದ ಕಾಣಿಕೆಗಳನ್ನು ನೀಡಿದ್ದಾರೆ. ಪುರಾಣಗಳ ಕಾಲದಿಂದಲೂ ಮಹಿಳೆಯರು ರಾಜ್ಯಾಡಳಿತ, ಯುದ್ಧ, ಶಾಂತಿ, ಸಾಹಿತ್ಯ & ಕಲೆಗಳ ಪ್ರಗತಿಯಲ್ಲಿ ತಮ್ಮನ್ನು ಯಶಸ್ವಿಯಾಗಿ ತೊಡಗಿಸಿಕೊಂಡಿದ್ದಾರೆ. ದುರ್ಗಿ, ಕಾಳಿ, ಚಂಡಿ, ರಾಜರಾಜೇಶ್ವರಿ, ಅನ್ನಪೂರ್ಣೇಶ್ವರಿ, ಮುಂತಾದ ಹೆಸರುಗಳು ಇದಕ್ಕೆ ಪುಷ್ಟಿಯನ್ನು ನೀಡುತ್ತವೆ. ರಾಮಾಯಣದಲ್ಲಿ ಕೈಕೇಯಿ ದಶರಥನೊಂದಿಗೆ ಯುದ್ದದಲ್ಲಿ ಭಾಗವಹಿಸಿ ಗೆಲುವಿಗೆ ಕಾರಣಳಾಗಿದ್ದನ್ನು ಕಾಣುತ್ತೇವೆ. ಅಪಲ, ಮೈತ್ರೇಯಿ, ಗಾರ್ಗಿ, ವಿಶ್ವಾವರ, ಘೋಷ ಮುಂತಾದ ವಿದ್ವನ್ಮಣಿಗಳನ್ನು, ಸೀತಾ, ಸಾವಿತ್ರಿ, ದ್ರೌಪದಿ, ಮಂಡೋದರಿ, ತಾರ ಮುಂತಾದ ಸ್ತ್ರೀ ರತ್ನಗಳನ್ನು ಕೇಳಿದ್ದೇವೆ. ಅನಾದಿ ಕಾಲದಿಂದಲೂ ಪುರುಷರ ಸಾಧನೆಗಳ ಹಿಂದೆ ಸ್ತ್ರೀ ಬೆಂಬಲಿಗಳಾಗಿ, ಮಾರ್ಗದರ್ಶಕಳಾಗಿ, ನೆರಳಾಗಿ ಇದ್ದು ತಮ್ಮ ಗೌರವವನ್ನು ಉಳಿಸಿಕೊಂಡಿದ್ದಾರೆ.

ಸಮಾಜದಲ್ಲಿ ಕೆಲವು ಮಹಿಳೆಯರು ತಮ್ಮ ಸ್ಥಾನ ಬಲದಿಂದ ಪ್ರಾಮುಖ್ಯತೆಯನ್ನು ಪಡೆದರೆ ಇನ್ನು ಕೆಲವರು ತಮ್ಮ ಕಾರ್ಯ ಬಲದಿಂದ ಪ್ರಾಮಯುಖ್ಯತೆಯನ್ನು ಪಡೆದಿದ್ದಾರೆ. ಇಂತಹ ಸಂದರ್ಭದಲ್ಲಿ ಯುದ್ದದಲ್ಲಿ ಹೋರಾಡಿ ಗೆಲುವಿಗೆ ಕಾರಣರಾದವರು ನಮಗೆ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. ಪ್ರಭುವರ್ಗದ ಮಹಿಳೆಯರು ಆಡಳಿತ ನಡೆಸುವಲ್ಲಿ, ಯುದ್ದದಲ್ಲಿ ಮತ್ತು ವೀರಮರಣದಂತಹ ಸಾಹಸಕಾರ್ಯಗಳನ್ನು ನಿರ್ವಹಿಸುವಲ್ಲಿ ಪ್ರಾಮುಖ್ಯತೆಯನ್ನು ಪಡೆದರೆ, ಸಾಮಾನ್ಯವರ್ಗದ ಮಹಿಳೆಯರು ಯುದ್ದಗಳಂತಹ ಸಾಹಸ ಕಾರ್ಯಗಳಲ್ಲಿ ಭಾಗವಹಿಸಿ ಗೆದ್ದು / ಸೋತು / ಮರಣಹೊಂದುವ ಮೂಲಕ ಸಮಾಜದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವುದನ್ನು

ನೋಡುತ್ತೇವೆ. ಈ ಮೂಲಕ ಅಡುಗೆ ಮಡುವ ಕೈ ಆಯುಧವನ್ನೂ ಹಿಡಿಯಬಲ್ಲದು ಎಂದು ನಿರೂಪಿಸಿದ್ದಾರೆ. ಈ ಕುರಿತು ದೇಶದಾದ್ಯಂತ ದೊರೆತಿರುವ ಮಹಾಸತಿ ಕಲ್ಲುಗಳು ಮತ್ತು ವೀರಗಲ್ಲುಗಳು ಮಾಹಿತಿ ನೀಡುತ್ತವೆ. ಪ್ರಸ್ತುತ ಲೇಖನದಲ್ಲಿ, ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿರುವ ಶಾಸನಗಳು ಮತ್ತು ವೀರ–ಮಾಸ್ತಿಕಲ್ಲುಗಳನ್ನು ಆಧಾರವಾಗಿಟ್ಟುಕೊಂಡು ಕ್ರಿ. ಶ. 5ನೇ ಶತಮಾನದಿಂದ 18ನೇ ಶತಮಾನದವರೆಗೆ ಜರುಗಿರುವ ಯುದ್ಧಗಳಲ್ಲಿ ಭಾಗವಹಿಸಿರುವ ಪ್ರಭುತ್ವ ವರ್ಗದ & ಸಾಮಾನ್ಯ ವರ್ಗದ ಮಹಿಳೆಯರ ಪಾತ್ರವನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

**ಸಂಶೋಧನೆಗೆ ಅವಕಾಶ : (Research Gap)**

ವೀರಗಲ್ಲು & ಮಾಸ್ತಿಕಲ್ಲುಗಳು ಹಾಗೂ ಪ್ರಭುವರ್ಗದ ಮಹಿಳೆಯರನ್ನು ಕುರಿತು ಹಲವಾರು ಲೇಖನಗಳು ಬಂದಿವೆ. ಯುದ್ಧದಲ್ಲಿ ಸಾಮಾನ್ಯ ವರ್ಗದ ಮಹಿಳೆಯರ ಪಾತ್ರವನ್ನು ಕುರಿತ ಮಾಹಿತಿಯ ಕೊರತೆ ಇದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಆಯ್ದ ಶಾಸನೋಕ್ತ ಮಹಿಳೆಯರ ಸಾಹಸ, ತ್ಯಾಗ, ಬಲಿದಾನಗಳನ್ನು ಪರಿಚಯಿಸುವ ಕಾರ್ಯವನ್ನು ಪ್ರಸ್ತುತ ಲೇಖನದ ಮೂಲಕ ಮಾಡಲಾಗಿದೆ.

**ಸಂಶೋಧನಾ ವಿಧಾನ : (Methodology)**

ಕ್ಷೇತ್ರಕಾರ್ಯದ ಮೂಲಕ ಮೂಲ ಆಕರಗಳ ಪರಿಶೀಲನೆ, ಮಾಹಿತಿ ಸಂಗ್ರಹ, ಶಿವಮೊಗ್ಗ ವಸ್ತು ಸಂಗ್ರಹಾಲಯ ಸಮೀಕ್ಷೆ ಹಾಗೂ ಎಪಿಗ್ರಾಫಿಯಾ ಕರ್ನಾಟಿಕ ಗ್ರಂಥಮಾಲಿಕೆಗಳ ಅಧ್ಯಯನ, ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಅಧ್ಯಯನ ಮುಂತಾದ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

**ಪ್ರಾಮುಖ್ಯತೆ : (Importance)**

ಆಡಳಿತ, ಯುದ್ಧ, ಶಾಂತಿ, ಧರ್ಮಾಚರಣೆ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಮಹಿಳೆಯರ ಪಾತ್ರವನ್ನು ತಿಳಿಯಬಹುದಾಗಿದೆ. ಯುದ್ಧಗಳಲ್ಲಿ ಪ್ರಭುವರ್ಗದ ಮಹಿಳೆಯರಂತೆಯೇ ಸಾಮಾನ್ಯ ವರ್ಗದ ಮಹಿಳೆಯರೂ ಹೋರಾಟ ಮಾಡಿದ್ದನ್ನು ತಿಳಿಯಬಹುದು. ಸ್ಮಾರಕ ಶಿಲೆಗಳನ್ನು ನಿರ್ಮಿಸುವ ಮೂಲಕ ವೀರ ಪುರುಷ–ಮಹಿಳೆಯರ ಸಾಹಸಗಳನ್ನು ಮುಂದಿನ ತಲೆಮಾರಿನವರಿಗೆ ತಲುಪಿಸುವ, ಹಾಗೂ ಅವರಲ್ಲಿ ಸತ್ಯ, ನ್ಯಾಯ, ಧರ್ಮ ಮತ್ತು ತ್ಯಾಗದಂತಹ ಉದಾತ್ತ ಗುಣಗಳನ್ನು ಬೆಳೆಸುವಂತಹ ಕಾರ್ಯವನ್ನು ಈ ಸ್ಮಾರಕಗಳು ನಿರ್ವಹಿಸಿದ್ದರಿಂದ ಇವುಗಳ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆದಿದೆ.

ಶಿಕಾರಿಪುರ ತಾಲ್ಲೂಕಿನ ಇತಿಹಾಸ & ಸಂಸ್ಕೃತಿಯನ್ನು ಅಧ್ಯಯನ ಮಾಡಲು ವಿವಿಧ ರೀತಿಯ ಆಧಾರಗಳು ಲಭ್ಯವಿವೆ. ಪ್ರಾಚೀನ ಕಾಲದಿಂದಲೂ ಶಾಸನಗಳನ್ನು ಬಿಟ್ಟರೆ ಅಧಿಕ ಸಂಖ್ಯೆಯಲ್ಲಿ ಸಿಗುವಂತಹ ಐತಿಹಾಸಿಕ ದಾಖಲೆಗಳೆಂದರೆ ವೀರಗಲ್ಲುಗಳು ಮತ್ತು ಮಾಹಾಸತಿ ಕಲ್ಲುಗಳು. ನಾಡಿನ ಆಡಳಿತಗಾರರು ಮತ್ತು ಸಾಮಾನ್ಯರ ಧೈರ್ಯ, ಶೌರ್ಯ, ಸಾಹಸ, ಪರಾಕ್ರಮ, ತ್ಯಾಗ ಮತ್ತು ಬಲಿದಾನಕ್ಕೆ ಈ ದಾಖಲೆಗಳು ನಿದರ್ಶನವಾಗಿವೆ. ಈ ದಾಖಲೆಗಳು ಆಯಾ ಕಾಲಘಟ್ಟದಲ್ಲಿ ಸಂಭವಿಸಿದ್ದ ಗೋಗ್ರಹಣ, ಯುದ್ಧಗಳು, ಕೆರೆ, ಕಟ್ಟೆ ಹಾಗೂ ಕೋಟೆಗಳ ನಿರ್ಮಾಣಗಳನ್ನು ವಿವರಿಸುತ್ತವೆ.

ಸಾಮ್ರಾಜ್ಯ ವಿಸ್ತರಣೆ, ರಕ್ಷಣೆ, ಪ್ರಜಾಪಾಲನೆ, ಗೋಗ್ರಹಣ, ದುಷ್ಟಶಿಕ್ಷಣ–ಶಿಷ್ಟರಕ್ಷಣ, ಹಾಗೂ ಸ್ತ್ರೀಯರ ಮಾನಭಂಗ ಮುಂತಾದ ಸಂದರ್ಭಗಳಲ್ಲಿ ಯುದ್ಧಗಳು ಸಂಭವಿಸಿರುವುದು ಇತಿಹಾಸದಲ್ಲಿ ದಾಖಲಾಗಿದೆ. **"ದೇಹ ಅಶಾಶ್ವತವಾದುದು – ಕೀರ್ತಿ ಶಾಶ್ವತವಾದುದು, ಅಶಾಶ್ವತವಾದ ದೇಹವು ಹೋದರೆ ಹೋಗಲಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕು"** [1] ಎಂಬ ಉತ್ಕಟವಾದ ಬಯಕೆ ಅಂದಿನ ಆಡಳಿತಗಾರರು, ಅಧಿಕಾರಿಗಳು, ಜನರಸಾಮಾನ್ಯರು ಹಾಗೂ ಮಹಿಳೆಯರದ್ದಾಗಿತ್ತು.

**"ಜಿತೇನ ಲಭ್ಯತೇ ಲಕ್ಷ್ಮೀ, ಮೃತೇನಾಪಿ ಸುರಾಂಗನಾ**

**ಕ್ಷಣ ವಿಧ್ವಂಸಿನಿ ಕಾಯೇ, ಕಾ ಚಿಂತಾ ಮರಣೇ"[2] ಎಂಬ ಶ್ಲೋಕದಂತೆ"** ಯುದ್ದದಲ್ಲಿ ಗೆದ್ದರೆ ಇಹಲೋಕದ ಸುಖವನ್ನು, ಸತ್ತರೆ ಪರಲೋಕದ ಸುಖವನ್ನು ಪಡೆಯಬಹುದು"[3]

"ಯುದ್ಧದಲ್ಲಿ ಹೋರಾಡಿ ಮರಣಹೊಂದಿದ ವ್ಯಕ್ತಿಯ ಹೆಸರು, ತ್ಯಾಗ–ಬಲಿದಾನಗಳು, ಮುಂದಿನ ಇಪ್ಪತ್ತೊಂದು ತಲೆಮಾರಿನವರೆಗೂ ಶಾಶ್ವತವಾಗಿ ಇರುತ್ತದೆ"[4] ಎಂಬ ನಂಬಿಕೆ ಸಮಾಜದಲ್ಲಿ ಆಳವಾಗಿ ಬೇರೂರಿದ್ದು, ಇಂತಹ ಕಾರ್ಯಗಳಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿತ್ತು. ಈ ಹಿನ್ನೆಲೆಯಲ್ಲಿ ರಾಜ, ಸೇನಾಧಿಪತಿ, ಸೈನಿಕರು ಅನೇಕ ಯುದ್ದಗಳಲ್ಲಿ ಹೋರಾಡಿರುವುದನ್ನು ನಾವು ಕಾಣುತ್ತೇವೆ. ಎಷ್ಟೋ ರಾಜರುಗಳು ಯುದ್ದದಲ್ಲಿ ಹೋರಾಡಿ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರೆ, ಕೆಲವರು ತಮ್ಮ ಸಾಮ್ರಾಜ್ಯಗಳನ್ನು ಕಳೆದು ಕೊಂಡಿದ್ದಾರೆ. ಮತ್ತೆ ಕೆಲವರು ಪ್ರಭಲರಾದ ರಾಜರಿಗೆ ಕಪ್ಪಕಾಣಿಕೆಗಳನ್ನು ನೀಡುವ ಮೂಲಕ, ಅಥವಾ ತಮ್ಮ ಹೆಣ್ಣುಮಕ್ಕಳನ್ನು ಕೊಟ್ಟು ವೈವಾಹಿಕ ಸಂಬಂಧ ಬೆಳೆಸುವ ಮೂಲಕ, ಸಂಧಾನ ಮಾಡಿಕೊಂಡು ಯುದ್ದಕ್ಕೆ ತಿಲಾಂಜಲಿಯನ್ನು ಹೇಳುತ್ತಾರೆ.

ಪುರುಷರಿಗೆ ಸರಿಸಮಾನವಾಗಿ ಮಹಿಳೆಯರೂ ಕೂಡ ಯುದ್ದದಲ್ಲಿ ತಮ್ಮ ವಿರೋಧಿಗಳನ್ನು ಎದುರಿಸಿದ ಪ್ರಸಂಗಗಳನ್ನು ಕಾಣುತ್ತೇವೆ. ಅನೇಕ ಮಹಿಳೆಯರು ಯುದ್ದದಲ್ಲಿ ನೇರವಾಗಿ ಹೋರಾಡಲು ಆಗದಿದ್ದರೂ ಕೂಡ, ಯುದ್ದಕ್ಕೆ ಹೊರಟ ತಮ್ಮ ಗಂಡನಿಗೆ ಧೈರ್ಯ ತುಂಬುವ ರೀತಿಯಲ್ಲಿ ಆರತಿ ಎತ್ತಿ,

ಹಣೆಗೆ ತಿಲಕವಿಟ್ಟು ಜಯಘೋಷ ಮಾಡಿರುವುದು ಕಾವ್ಯಗಳಲ್ಲಿ, ಶಾಸನಗಳಲ್ಲಿ ವ್ಯಕ್ತವಾಗಿದೆ.

ಹೀಗೆ ಪ್ರಭುವರ್ಗದ ಮಹಿಳೆಯರು ಪತಿಯ ಜೊತೆಯಲ್ಲಿ ರಾಜ್ಯವನ್ನು, ಪ್ರಜೆಗಳನ್ನು ರಕ್ಷಿಸಲು ಶತ್ರುಗಳ ಜೊತೆ ಹೋರಾಡಿದರು. ಉದಾ: ಗೇರುಸೊಪ್ಪೆಯ ರಾಣಿ ಭೈರಾದೇವಿ, ರಾಣಿ ಅಬ್ಬಕ್ಕ, ಕೆಳದಿಯ ರಾಣಿ ಚೆನ್ನಮ್ಮಾಜಿ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಮುಂತಾದವರು ಈ ವರ್ಗಕ್ಕೆ ಸೇರುತ್ತಾರೆ. ಅಂತೆಯೇ ಸಾಮಾನ್ಯವರ್ಗದ ಮಹಿಳೆಯರು ಹಸುಗಳನ್ನು ಕದಿಯಲು ಬಂದ ಕಳ್ಳರೊಡನೆ, ಸ್ತ್ರೀಯರಿಗೆ ಅಪಮಾನವಾದ ಸಂದರ್ಭದಲ್ಲಿ, ಶತ್ರುಗಳು ಕೋಟೆಗೆ ಮುತ್ತಿಗೆ ಹಾಕುವ ಸಂದರ್ಭದಲ್ಲಿ, ಸೈನಿಕರಾಗಿರುವ ತಮ್ಮ ಪತಿಯ ಪರವಾಗಿ, ಪುರುಷರ ಸರಿಸಮಾನವಾಗಿ ಹೋರಾಟ ಮಾಡಿದ್ದಾರೆ.

ನಾಗರಖಂಡ–70 ಪ್ರದೇಶವನ್ನು ನಾಳ್ಗಾವುಂಡಿಯಾಗಿ ಆಳ್ವಿಕೆ ಮಾಡುತ್ತಿದ್ದ ನಾಳ್ಗಾವುಂಡಿ ಜಕ್ಕಿಯಬ್ಬೆಯು ಕ್ರಿ.ಶ. 912 ರಿಂದ 918 ರ ಕಾಲಾವಧಿಯಲ್ಲಿ ಶತ್ರುಗಳ ವಿರುದ್ಧ ಹೋರಾಡಿದ ಉಲ್ಲೇಖವು ಬಂದಳಿಕೆ ಶಾಸನದಲ್ಲಿದೆ.[5] ಅದರ ಪ್ರಕಾರ ನಾಗರಖಂಡ–70ರ ನಾಳ್ಗಾವುಂಡ ನಾಗಾರ್ಜುನನು ತುರುಗೊಳ್ ಯುದ್ಧವೊಂದರಲ್ಲಿ ಹೋರಾಡಿ ಅತಿತವಾಗಲು, ಜಕ್ಕಿಯಬ್ಬೆ ಅಧಿಕಾರಕ್ಕೆ ಬಂದು ಶತ್ರುಗಳ ವಿರುದ್ಧ ಹೋರಾಡಿ ಗೋವುಗಳನ್ನು ರಕ್ಷಿಸಿದಳು. ತನ್ನ ಪತಿಯ ಸಾವಿಗೆ ಕಾರಣರಾದವರ ವಿರುದ್ಧ ಪ್ರತೀಕಾರವನ್ನು ತೀರಿಸಿಕೊಂಡಳು. ತನ್ನ ರಾಜ್ಯದ ಸುತ್ತಲೂ ಇದ್ದ ಎಲ್ಲಾ ಶತ್ರುಗಳನ್ನು ಸಮರ್ಥವಾಗಿ ಎದುರಿಸಿ, ಹಿಮ್ಮೆಟ್ಟಿಸಿ ರಾಜ್ಯಕ್ಕೆ ಶತ್ರುಗಳ ಭಯ ಇಲ್ಲದಂತೆ ಮಾಡಿದಳು, ರಾಜ್ಯದ ಆಂತರಿಕ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸಿದಳು. ಎಂದು ಬಂದಳಿಕೆ ಶಾಸನ ಉಲ್ಲೇಖಿಸಿದೆ.[6]

ಕ್ರಿ. ಶ. 1067 ರ ಬಳ್ಳಿಗಾವಿಯ ಶಾಸನದಲ್ಲಿ[7] ಹಂಪಚಟ್ಟನ ಕುಲವಧು ನಾಗಿಯಕ್ಕ ದುಷ್ಟರನ್ನು ಶಿಕ್ಷಿಸುವ ಶಿಷ್ಟರನ್ನು ರಕ್ಷಿಸುವ ಎಂಬ ಉಲ್ಲೇಖವಿರುವುದರಿಂದ ನಾಗಿಯಕ್ಕ ಯುದ್ಧವೊಂದನ್ನು ಮಾಡಿ ತನ್ನ ನಾಡಿದ ಜನರನ್ನು ರಕ್ಷಣೆ ಮಾಡಿರುವಳೆಂದು ತಿಳಿಯುತ್ತದೆ. ಸಾಮಾನ್ಯ ಮಹಿಳೆಯಾಗಿದ್ದ ವೆಣ್ಣಿಲಸೆಟ್ಟಿಕವ್ವೆಯ ಹೋರಾಟವನ್ನು ಕುರಿತು........ ಶಾಸನ ಹೀಗೆ ತಿಳಿಸುತ್ತದೆ.

**"ಖಳರಳವಂ ಕಳಲ್ಚಿ ನೆರೆ ಕಳ್ಳರನ ಕೋಳ್ಳಿಯ ಬಾಧೆಯಂ ಬೇಗ**

**ಳ್ದಳರೆ ----- ------ ------- -----**

**ಬಳಯುತೆ ದುರ್ಗಿಯೋಲು ಪೃಥ್ವಿಸೆಟ್ಟಿಯ ವೆಂಣ್ಣಲನಾರಿ ನಾಮದಿಂ"**

ಈ ಶಾಸನದಲ್ಲಿ ಕಾಮಿಶೆಟ್ಟಿಯನ್ನು ವೀರನೆಂದು ಪ್ರಶಂಶಿಸಲಾಗಿದೆ. ಇವನು ಯುದ್ದದಲ್ಲಿ ಮರಣ ಹೊಂದಿದ್ದರಿಂದಾಗಿ, ಈತನ ಪತ್ನಿ ವೆಣ್ಣಿಲಸೆಟ್ಟಿಕವ್ವೆ ಕೊಣವತ್ತಿಯನ್ನು ಸ್ವತಃ ಆಳುವುದರ ಜೊತೆಗೆ ಅದರ ಕ್ಷಣೆಯ ಹೊಣೆಯನ್ನು ಹೊತ್ತು ತನ್ನ ಗಂಡನ ಸಾವಿಗೆ ಕಾರಣರಾದ ವೈರಿಗಳ ವಿರುದ್ಧ ಚಂಡಿಯಾಗಿ, ಕಾಳಿಯಾಗಿ ಹೋರಾಡಿ, ವೈರಿಗಳ ಮೂಳೆಯನ್ನು ಮುರಿದಿ, ಕರುಳನ್ನು ಬಗೆದು ಸೇಡು

ತೀರಿಸಿಕೊಳ್ಳುತ್ತಾಳೆ. ರಣರಂಗದಲ್ಲಿ ನೇರವಾಗಿ ಹೋರಾಡಿದ ಈ ಪ್ರದೇಶದ ಪ್ರಮುಖ ಮಹಿಳೆಯರ ಸಾಲಿನಲ್ಲಿ ವೆಣ್ಣಿಲಸೆಟ್ಟಿಕವ್ವೆಯು ಪ್ರಮುಖಳಾಗಿದ್ದಾಳೆ.

ಶಿಕಾರಿಪುರದ ವೀರಗಲ್ಲಿನಲ್ಲಿ ಹರಿಯಕ್ಕನ ಶಿಲ್ಪವಿದ್ದು, ಈಕೆ ಪ್ರಭುವರ್ಗದ ಮಹಿಳೆಯಾಗಿರದಿದ್ದರೂ ಕೂಡ ಯುದ್ದದಲ್ಲಿ ಈಕೆಯು ಹೋರಾಡಿರುವುದು ಪ್ರಮುಖವಾಗಿದೆ. ತಾರಿಗವುಡನ ಮಗನಾದ ಮಾದಿಗೌಡನು ಪಲಿವರನ ಕೂಡೆ ಕಾದಾಡಿ ಮಡಿಯುತ್ತಾನೆ. ಮಾದಿಗೌಡನ ತಮ್ಮ ಚಂದಪ್ಪನು ತನ್ನ ಅಣ್ಣ ಮಾದಿಗೌಡನಿಗಾಗಿ ವೀರಗಲ್ಲನ್ನು ನಿಲ್ಲಿಸುತ್ತಾನೆ. ತನ್ನ ತಂದೆಯ ಮರಣದಿಂದ ನೊಂದ ಹರಿಯಕ್ಕ ತಂದೆಯನ್ನು ಕೊಂದವರ ಮೇಲೆ ಸೇಡು ತೀರಿಸಿಕೋಳ್ಳಲು ಹೋರಾಟಕ್ಕಿಳಿಯುವುದು ಪ್ರಮುಖವಾಗಿದೆ. ಶಿಲ್ಪದಲ್ಲಿ ಹರಿಯಕ್ಕನು ಶತ್ರುವಿನ ಜುಟ್ಟನ್ನು ಹಿಡಿದಿದ್ದು, ಶತ್ರುವು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ದೃಶ್ಯವಿದೆ. ಈ ಹೋರಾಟದಲ್ಲಿ ಹರಿಯಕ್ಕ ಮಡಿಯುತ್ತಾಳೆ. ನಂತರ ಈಕೆಯ ಚಿಕ್ಕಪ್ಪ ಶಿಕಾರಿಪುರದಲ್ಲಿ ಈ ವೀರಮಾಸ್ತಿಗಲ್ಲನ್ನು ನಿಲ್ಲಿಸಿರುವುದನ್ನು ಕಾಣಬಹುದು.[8] ಪ್ರಾಚೀನ ಕಾಲದಿಂದ ಕ್ರಿ. ಶ. 18 ನೇಯ ಶತಮಾನದ ಅವಧಿಯವರೆಗೆ ನೋಡಿದಾಗ ಒಂದು ರಾಜ್ಯದ ರಕ್ಷಣೆಗಾಗಿ ಮತ್ತು ವಿಸ್ತರಣೆಗಾಗಿ ಯುದ್ದದಲ್ಲಿ ನೇರವಾಗಿ ಭಾಗವಹಿಸಿ ಶತ್ರುಗಳನ್ನು ಸೋಲಿಸಿ ಹಿಮ್ಮೆಟ್ಟಿಸಿದವರಲ್ಲಿ ಚೆನ್ನಮ್ಮಾಜಿಯು ಪ್ರಮುಖಳಾಗಿದ್ದಾಳೆ. ತನ್ನ ಅಧಿಕಾರಾವಧಿಯಲ್ಲಿ ಅನೇಕ ಯುದ್ದಗಳನ್ನು ಮಾಡಿರುವುದರಿಂದ ಈ ಪ್ರದೇಶದಲ್ಲಿ ಸೈನಿಕ ಸಾಧನೆ ಮಾಡಿದ ಪ್ರಮುಖ ಮಹಿಳೆಯಾಗಿದ್ದಾಳೆ.

**ಉಪಸಂಹಾರ:**

ಹೆಣ್ಣು ಮಾಯೆಯಲ್ಲ – ಪುರುಷನ ಛಾಯೆಯಲ್ಲ ಸ್ವತಂತ್ರ ಅಸ್ಥಿತ್ವ ಉಳ್ಳವಳು. ಮಾನವ ನಾಗರಿಕತೆಯನ್ನು ಬಲಪಡಿಸುವಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಿದ್ದಾರೆ. ಸಮಾಜದಲ್ಲಿ ಬಹುಮುಖಿ ಪಾತ್ರವನ್ನು ನಿರ್ವಹಿಸಿ, ಗಂಡ, ಮನೆ, ಮಕ್ಕಳನ್ನು ಪಾಲಿಸಿ, ಪೋಷಿಸಿ, ಗೃಹಲಕ್ಷ್ಮಿಯಾಗಿ, ರಾಜ್ಯಲಕ್ಷ್ಮಿಯಾಗಿ, ಮುನಿದವರಿಗೆ ಮಾರಿಯಗಿ, ಕೆಟ್ಟವರಿಗೆ ಕಾಳಿಯಾಗಿ, ವೈರಿಗಳಿಗೆ ದುರ್ಗಿಯಾಗಿ, ಅನ್ನ ನೀಡುವ ಭೂಮಿಯಾಗಿ, ಪಾಪತೊಳೆಯುವ ಗಂಗೆಯಾಗಿ ಭಾರತೀಯ ಸಮಾಜದಲ್ಲಿ ಪೂಜನೀಯ ಸ್ಥಾನವನ್ನು ಹೊಂದಿದ್ದಾಳೆ. ಇಂತಹ ಸ್ತ್ರೀಯರು ಪ್ರಾಚೀನ ಕಾಲದಿಂದಲೂ ಪುರುಷರಷ್ಟೇ ಜಾಣ್ಮೆ, ದಕ್ಷತೆ, ಧೈರ್ಯ, ಶೌರ್ಯವನ್ನು ಮೆರೆದಿದ್ದಾರೆ.

ಯುದ್ಧಗಳಂತಹ ಪುರುಷರ ಕಾರ್ಯಗಳಲ್ಲಿ ಗಂಡುಗಚ್ಚೆಹಾಕಿ, ಕೆಚ್ಚೆದೆಯಿಂದ ಕಾದಾಡಿ ಪುರುಷರನ್ನೇ ಸೋಲಿಸಿ ಗೆಲುವು ಪಡೆದುಕೊಂಡ ಗಂಗ ಅರಸ ಪೆರ್ಮಾಡಿದೇವನ ರಾಣಿ ಬಾಚಲಾದೇವಿ, ವೀರಶಾನ್ತರಸನ ರಾಣಿ ಛಗಲಾದೇವಿ, ಗೇರುಸೊಪ್ಪೆಯ ರಾಣಿ ಭೈರಾದೇವಿ, ರಾಣಿ ಅಬ್ಬಕ್ಕ, ಗುತ್ತಮಲ್ಲದೇವನ ರಾಣಿ ಪದುಮಲ್ಲದೇವಿಯು, ಕೆಳದಿಯ ರಾಣಿ ಚೆನ್ನಮ್ಮಾಜಿ, ಕಿತ್ತೂರು ರಾಣಿ ಚೆನ್ನಮ್ಮ,

ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹಾಗೂ ಸಾಮಾನ್ಯ ವರ್ಗದ ಸ್ತ್ರೀಯರಾಗಿದ್ದ ನಾಳ್ಗಾವುಂಡಿ ಜಕ್ಕಿಯಬ್ಬೆ, ಅಕ್ಕಾದೇವಿ, ನಾಗಿಯಕ್ಕ, ವೆಣ್ನಿಲಸೆಟ್ಟಿಕವ್ವೆ, ಮಲ್ಲಂದೂರು ಮಾದರ ಕಾಳನ ಪತ್ನಿ ಬೊಮ್ಮೊಂಬೆ ಮುಂತಾದ ನಾರಿಮಣಿಯರ ಪಟ್ಟಿಯು ಇಂದಿಗೂ ವೀರ–ಮಾಸ್ತಿಕಲ್ಲುಗಳ ಮೂಲಕ ನಮ್ಮೊಂದಿಗೆ ಇದೆ.

ಇಂತಹ ನಾರಿಯರ ಯಶೋಗಾಥೆಯು ಮುಂದಿನ ಜನಾಂಗಕ್ಕೆ ಸ್ಫೂರ್ತಿಯಾಗುವುದರಿಂದ ಇಂತಹ ಸ್ಮಾರಕಗಳನ್ನು ರಕ್ಷಿಸಿ, ಮುಂದಿನ ತಲೆಮಾರಿಗೆ ಈ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ತಿಳಿಸಬೇಕಾದ ಜವಾಬ್ದಾರಿ ಇತಿಹಾಸಕ್ಕೆ ಇದೆ. ಈ ಮೂಲಕ ಲಿಂಗ ತಾರತಮ್ಯ, ಮೇಲು–ಕೀಳು, ಪ್ರಭು–ಪ್ರಜೆ ಮುಂತಾದ ಭಾವನೆಗಳನ್ನು ಅಳಿಸಿಹಾಕಿ ಸಮಾನ ಸಮಾಜವನ್ನು ಸ್ಥಾಪಿಸಲು ಸಾದ್ಯವಾಗುತ್ತದೆ.

**ಕೊನೆ ಟಿಪ್ಪಣಿಗಳು**

[1] .ಗದಾಯುದ್ದ 2–4
[2] .ಎ ಕ (ರೈ) 7. ಶಿಕಾರಿಪುರ – 60, ಕ್ರಿ ಶ 1115
[3] .ಎ ಕ (ರೈ) 7. ಶಿಕಾರಿಪುರ – 307, ಕ್ರಿ ಶ 1015
[4] ಎ ಕ (ರೈ) 7. ಶಿಕಾರಿಪುರ – 220, ಕ್ರಿ ಶ 1015
[5] .ಎ ಕ (ರೈ) 7. ಶಿಕಾರಿಪುರ – 219 ಬಂದಳಿಕೆ ಕ್ರಿ ಶ 918
[6] .ಎ ಕ (ರೈ) 7. ಶಿಕಾರಿಪುರ – 219 ಬಂದಳಿಕೆ ಕ್ರಿ ಶ 918
[7] .ಎ ಕ (ರೈ) 7. ಶಿಕಾರಿಪುರ – 169 ಬಳ್ಳಿಗಾವಿ ಕ್ರಿ ಶ 1067
[8] .ಎ ಕ (ರೈ) 7. ಶಿಕಾರಿಪುರ – 2 ಕ್ರಿ ಶ 1400